ಒಮ್ಮೊಮ್ಮೆ ಠಾಕೂರರು ತಾವೇ ಸೆಣಬಿನ ದಾರ, ಬಿದಿರಿನ ಕಡ್ಡಿಗಳನ್ನು ತಂದುಹಾಕುತ್ತಿದ್ದರು. ಶ್ರೀಮಾತೆ ತುಂಬಾ ಸುಂದರವಾಗಿ ಆಸನ ಹಾಗೂ ಇನ್ನಿತರ ನಿತ್ಯ ಉಪಯೋಗದ ವಸ್ತುಗಳನ್ನು ತಯಾರಿಸುತ್ತಿದ್ದರು. ಹೂ ಕೊಯ್ದು ತಂದು, ಮಾಲೆ ಕಟ್ಟಿ, ಭವತಾರಿಣಿಗೆ ಅರ್ಪಿಸುವ ಕೆಲಸವನ್ನು ಅವರು ನನ್ನಿಂದ ಮಾಡಿಸುತ್ತಿದ್ದರು. ಸಾಯಂಕಾಲ ನಾನು ಮಂದಿರಕ್ಕೆ ಹೋಗಿ ಅಥವಾ ಠಾಕೂರರ ಬಳಿಗೆ ಹೋಗಿ ಅದನ್ನು ಕೊಟ್ಟು ಬರುತ್ತಿದ್ದೆ. ಶ್ರೀಮಾತೆ ನನಗೆ ಎಲ್ಲವನ್ನೂ ಕಲಿಸಿಕೊಟ್ಟಿದ್ದರು.



ದೇವಿ ಸಿಂಹವಾಹಿನಿ, ಜಯರಾಮಬಾಟಿ

ಈಗಲೂ ನಾನು ಶ್ರೀಮಾತೆಯವರನ್ನು ನೋಡುತ್ತೇನೆ. ಹೇಗೆ ಅಂತ ತುಸು ವಿವರಿಸುತ್ತೇನೆ. ೧೯೫೫–೫೬ರಲ್ಲಿ ನಾನು ಪುರೀಕ್ಷೇತ್ರಕ್ಕೆ ಹೋದೆ. ಅಲ್ಲಿಂದ ನಾನು ಜಯರಾಮಬಾಟಿಯಲ್ಲಿಯ ಶ್ರೀಮಾತೆಯವರ ಮನೆಗೆ ಬಂದೆ. ಆಶ್ರಮದ ಮಹಂತರು (ಅಧ್ಯಕ್ಷರು) ತುಂಬಾ ಆನಂದಪಟ್ಟರು. ನನಗೆ ತಂಗುವ ಹಾಗೂ ಊಟದ ವ್ಯವಸ್ಥೆಯನ್ನು ಆಶ್ರಮವೇ ವಹಿಸಿಕೊಂಡಿತ್ತು. ನಾನು ಸ್ನಾನಮಾಡಿ ನೇರ ಸಿಂಹವಾಹಿನಿಯ ಮಂದಿರಕ್ಕೆ ಹೋದೆ. ''ಸಿಂಹವಾಹಿನಿಯ ಅಧಿದೇವತೆ ಯಾರು?'' ಎಂದು ನಾನು ಹಲವರನ್ನು ಕೇಳಿದೆ. ಆದರೆ ಯಾರೂ ಸರಿಯಾದ ಉತ್ತರ ಕೊಡಲಿಲ್ಲ. ಗಣಪತಿ ಪೂಜೆ ಮಾಡುತ್ತಿದ್ದ. ಅವನು ನನ್ನನ್ನು ನೋಡಿ ಕಾತರದಿಂದ ಎದ್ದು ನಿಂತು, ''ಬನ್ನಿ ಅತ್ತೆ, ಒಳಗೆ ಬನ್ನಿ. ಅದೆಂಥ ಭಾಗ್ಯ ನಮ್ಮದು! ಎಷ್ಟು ದಿನಗಳ ನಂತರ ನಾನು ಅತ್ತೆಯನ್ನು ನೋಡುವಂತಾಯಿತು!'' ಎಂದ. ಗಣಪತಿ ಶ್ರೀಮಾತೆಯವರ ಅಳಿಯ; ನನ್ನ ಅಳಿಯ ಕೂಡ.

ಗಣಪತಿಗೆ ಹೇಳಿದೆ, ''ಅಲ್ಲ ಗಣಪತಿ, ಸಿಂಹವಾಹಿನಿ ಯಾವ ದೇವತೆ ಹೇಳು?'' ಗಣಪತಿ ಹೇಳಿದ, ''ಅತ್ತೆ, ಈ ದೇವತೆ ತುಂಬಾ ಜಾಗೃತ ದೇವತೆ. ದೂರದ ಊರುಗಳಿಂದ ಎಷ್ಟೊಂದು ಜನ ಇಲ್ಲಿಗೆ ಬರುತ್ತಾರೆ! ಕೆಲವರ ಬೆರಳು ಬಿದ್ದುಹೋಗಿರುತ್ತದೆ, ಇನ್ನೂ ಕೆಲವರಿಗೆ ಹೊಟ್ಟೆನೋವು, ಕೆಲವರಿಗೆ ಮಗನ ರೋಗ ವಾಸಿಯಾಗಬೇಕು; ಇನ್ನಾರದೋ ಕುಟುಂಬದಲ್ಲಿ ಏನೇನೋ ಸಮಸ್ಯೆ. ಅವರು ಮಾತೆಯ ಮುಂದೆ ಹರಕೆ ಹೇಳಿಕೊಳ್ಳುತ್ತಾರೆ– ಅದರ ಫಲವಾಗಿ ಅವರಿಗೆ ಹೂ ದೊರಕುತ್ತದೆ. ಅವರು ತಮ್ಮ ಆಸೆಗಳನ್ನು ಪೂರೈಸಿಕೊಂಡು ಊರಿಗೆ ಮರಳುತ್ತಾರೆ '' ಎಂದ.

''ಅದು ಅರ್ಥವಾಯಿತು. ಆದರೆ ಸಿಂಹವಾಹಿನಿ ಯಾವ ದೇವತೆ ಅಂತ ಹೇಳು?'' ಎಂದೆ. ಗಣಪತಿ ತಲೆ ಕೆರೆದುಕೊಳ್ಳತೊಡಗಿದ. ಗಣಪತಿಯೇಕೆ, ಶ್ರೀಮಾತೆಯವರ ಅತ್ತಿಗೆಯಂದಿರನ್ನೂ ನಾನು ಕೇಳಿದೆ. ಅವರದೂ ಇದೇ ಕಥೆ. ಮಹಂತ ಸ್ವಾಮಿಗಳನ್ನು ಕೇಳಿದೆ. ಅವರೂ ಅಸ್ಪಷ್ಟವಾಗಿ ಉತ್ತರ ಕೊಟ್ಟರು. ಸಿಂಹವಾಹಿನಿ ಯಾವ ದೇವತೆ? ಇದೊಂದೇ ಪ್ರಶ್ನೆ ನನ್ನ ಮನಸ್ಸಿನಲ್ಲಿ ಉಳಿಯಿತು. ಪೂಜೆ ಮುಗಿಯಿತು. ಮಾತೆಯ ಮುಂದೆ ನಾನೊಬ್ಬಳೇ ಕುಳಿತಿದ್ದೆ. ನಾನು ಮಾತೆಯೊಂದಿಗೆ ಮಾತನಾಡುತ್ತಿದ್ದೆ: 'ಅಮ್ಮಾ ಸಿಂಹವಾಹಿನಿ, ನೀನು ಯಾರಮ್ಮ? ನೀನಂತೂ ಸಿಂಹವಾಹಿನಿ, ಆದರೆ ನೀನು ಯಾರು? ಅಮ್ಮಾ ಸಿಂಹವಾಹಿನಿ, ನೀನು ಯಾರು ಅಂತ ತಿಳಿಸಿಕೊಡು' ಎಂದು ಪ್ರಾರ್ಥಿಸಿದೆ. ಇದ್ದಕ್ಕಿದ್ದಂತೆ ಮಾತೆಯ ಮಂದಿರವೆಲ್ಲ ಸುಮಧುರವಾದ ಸುವಾಸನೆಯಿಂದ ತುಂಬಿಹೋಯಿತು. ಮಂದಿರದ ಕೋಣೆಯೆಲ್ಲ ಮಿಂಚಿನ ಬೆಳಕಿನಿಂದ ತುಂಬಿಕೊಂಡಿತು. ಮಾತೆಯ ಸಣ್ಣ ಘಟವನ್ನು ಎಲ್ಲಿ ಇಡಲಾಗಿತ್ತೋ ಅದನ್ನು ಅಲ್ಲಿ ನಾನು ಕಾಣಲಿಲ್ಲ. ಅಲ್ಲಿ ಒಂದು ಜೀವಂತ ಸಿಂಹ ನಿಂತಿತ್ತು! ಅದು ತನ್ನ ಎರಡೂ ಕಿವಿಗಳನ್ನು ಅಲುಗಾಡಿಸುತ್ತಿತ್ತು. ಅದರ ಬಾಲವೂ ಅಲುಗಾಡುತ್ತಿದೆ! ಸಿಂಹದ ಮೇಲೆ ಮಾತೆ ಜಗದ್ಧಾತ್ರಿ ಕುಳಿತಿದ್ದಾಳೆ! ಅವಳ ದೇಹ ಕೆಂಪು ಬಣ್ಣದಿಂದ ಕೂಡಿತ್ತು. ''ಅಮ್ಮಾ ಸಿಂಹವಾಹಿನಿ ನೀನೆ? ಹೌದಮ್ಮಾ, ಸಿಂಹವಾಹಿನಿ, ನೀನೇ ಜಗದ್ಧಾತ್ರಿ! ಅಮ್ಮಾ ಜಗದ್ಧಾತ್ರಿ, ನೀನೇ ಸಿಂಹವಾಹಿನಿ!'' ಅರೆ ಇದೇನಿದು! ಕಣ್ಣ ರೆಪ್ಪೆ ತೆರೆಯುವಷ್ಟರಲ್ಲಿ ಜಗದ್ಧಾತ್ರಿ ಅಲ್ಲಿ ಕಾಣಿಸಲಿಲ್ಲ. ಅಲ್ಲಿ ದಶಭುಜಗಳಿಂದ ಕೂಡಿದ ದುರ್ಗಾಮಾತೆ ಸಿಂಹದ ಮೇಲೆ ಕುಳಿತಿದ್ದಾಳೆ! ''ಅಮ್ಮಾ ಸಿಂಹವಾಹಿನಿ, ನೀನು ಜಗದ್ಧಾತ್ರಿ; ಅಷ್ಟೇ ಅಲ್ಲ, ನೀನೇ ದುರ್ಗೆ! ನೀನು ಎಷ್ಟು ರೂಪಗಳನ್ನು ಧರಿಸಿದ್ದೀಯಾ ತಾಯಿ?'' – ಈ ಆನಂದ ಹೆಚ್ಚು ಕಾಲ ಉಳಿಯಲಿಲ್ಲ. ಒಂದೆರಡು ನಿಮಿಷವಷ್ಟೇ ಇರಬೇಕು. ಅನಂತರ ನೋಡುತ್ತೇನೆ, ದುರ್ಗೆಯೂ ಅಲ್ಲಿಲ್ಲ, ಜಗದ್ಧಾತ್ರಿಯೂ ಇಲ್ಲ. ಸಿಂಹಾಸನವನ್ನೆಲ್ಲ ಬೆಳಗುತ್ತ ಕುಳಿತಿದ್ದಾಳೆ, ನನ್ನ ತಾಯಿ ಶಾರದಾಮಾತೆ! (ಚಿತ್ರದಲ್ಲಿರುವಂತೆ) ಕೂದಲನ್ನು ಎದೆಯ ಮೇಲೆ ಇಳಿಬಿಟ್ಟುಕೊಂಡು ಆಕೆ ಕುಳಿತಿದ್ದಾಳೆ! ಕೊರಳಸುತ್ತ ಸೀರೆಯನ್ನು ಸುತ್ತಿ* ನಾನು ಮಾತೆಗೆ ಪ್ರಣಾಮ ಮಾಡಿದೆ. ತಲೆಯೆತ್ತಿ ನೋಡಿದರೆ ಅಲ್ಲಿ ಶ್ರೀಮಾತೆ ಇರಲಿಲ್ಲ. ಸಿಂಹದ ಪೀಠದಲ್ಲಿ ಕುಳಿತ ಜಗದ್ಧಾತ್ರಿಯೂ ಇಲ್ಲ ; ದಶಭುಜಗಳಿಂದ ಕೂಡಿದ ನನ್ನ ದುರ್ಗಾಮಾತೆಯೂ ಇಲ್ಲ. ಗರ್ಭಗೃಹದ ಪೀಠದಲ್ಲಿದ್ದ ಘಟ ಹೇಗೆ ಇತ್ತೋ ಅದೇ ರೀತಿ ಇತ್ತು. ❋

*ಭಕ್ತಿ, ಗೌರವಗಳನ್ನು ವ್ಯಕ್ತಪಡಿಸುವ ಒಂದು ವಿಧಾನ ಇದು.

# ಸ್ವಾಮಿ ಅಖಂಡಾನಂದರ ಸ್ಮೃತಿಸಂಚಯ

ಬಂಗಾಳಿ ಮೂಲ: **ಸ್ವಾಮಿ ನಿರಾಮಯಾನಂದ**

ಕನ್ನಡಕ್ಕೆ: **ಕುಮಾರಿ ಪಿ.ಉಷಾ**

**ಭಾಗ-೩**



**೨೩ ಫೆಬ್ರವರಿ, ೧೯೩೬ :** ನಾಲ್ಕು ಘಂಟೆಯ ಸಮಯ. ಶ್ರೀರಾಮಕೃಷ್ಣರ ಜನ್ಮತಿಥಿ ಹಾಗೂ ಶತಾಬ್ದಿ ಉತ್ಸವಗಳ ಅಂಗವಾಗಿ ಪೂಜ್ಯ ಸ್ವಾಮಿ ಅಖಂಡಾನಂದ ಮಹಾರಾಜರು ಸ್ವಲ್ಪ ಮುಂಚಿತವಾಗಿಯೇ ಸಾರಗಾಛಿಯಿಂದ ಬೇಲೂರು ಮಠಕ್ಕೆ ಬಂದಿದ್ದಾರೆ. ಈ ನಡುವೆ ಅನೇಕ ಭಕ್ತರು ಅವರ ದರ್ಶನವನ್ನು ಪಡೆಯಲು ಕಾತರರಾಗಿ ಅಲ್ಲಿಗೆ ಬಂದಿದ್ದಾರೆ.

ಪೂಜ್ಯ ಮಹಾರಾಜರು ಕುರ್ಚಿಯಲ್ಲಿ ಕುಳಿತ್ತಿದ್ದಾರೆ. ಕೆಲವರು ನಿಂತಿದ್ದಾರೆ, ಕೆಲವರು ನೆಲದಮೇಲೆ ಕುಳಿತಿದ್ದಾರೆ. ಒಬ್ಬ ಭಕ್ತ ಅತಿಶಯವಾದ ಭಕ್ತಿಯಿಂದ ಗಾಳಿ ಬೀಸುತ್ತಿದ್ದಾನೆ. ಮಹಾರಾಜರೆಂದರು, ''ನಾನು ಬಂದದ್ದು ಅವರ (ಠಾಕೂರರ) ಇಚ್ಛೆಯಿಂದಲೇ. ಇಲ್ಲಿಗೆ ಬರುತ್ತೇನೆಂದು ಒಂದು ಸಲವೂ ಭಾವಿಸಿರಲಿಲ್ಲ.''

**೨೪ ಫೆಬ್ರವರಿ, ೧೯೩೬ :** ಇಂದು ಠಾಕೂರರ ಜನ್ಮತಿಥಿ ಪೂಜೆ ಹಾಗೂ ಶತಾಬ್ದಿಯ ಉದ್ಘಾಟನೆಯ ಕಾರ್ಯಕ್ರಮ ನಡೆಯುವುದು. ದಿನವಿಡೀ ಬೇಲೂರು ಮಠದಲ್ಲಿದ್ದು ಬಾಬಾರನ್ನು ನೋಡಿ, ಅನುಕೂಲವಾದರೆ ಅವರ ಸೇವೆಯನ್ನು ತುಸು ಮಾಡಬೇಕೆಂಬ ಆಸೆಯಿದೆ ಭಕ್ತನಿಗೆ.

ಸುತ್ತಲೂ ಏನೇನೆಲ್ಲ ನಡೆಯುತ್ತಿದೆ! ಮಹಡಿಯ ಮೇಲಿನ ಮಂದಿರದಲ್ಲಿ* ದಿನವಿಡೀ ಪೂಜೆ. ಆ ಕಡೆ ಲೌಡ್ ಸ್ಪೀಕರ್‌ನಲ್ಲಿ ಹಾಡಿನ ಮೇಲೆ ಹಾಡು. ಅಸಂಖ್ಯಾತ ಮಂದಿ ಭಕ್ತರ ಸಮ್ಮಿಳನದಿಂದ ಮಠದ ಪ್ರಾಂಗಣದಲ್ಲಿ ಸದ್ದುಗದ್ದಲ ತುಂಬಿದೆ. ಭಕ್ತ ಸಮುದ್ರದ ಅಲೆಗಳು ಉಕ್ಕಿ, ಪೂಜನೀಯ ಮಹಾರಾಜರ ದರ್ಶನವನ್ನು ಪಡೆದು ಮೆಲ್ಲನೆ, ಹರಿದು ಬರುತ್ತಿದೆ. ಏನಾಯಿತೋ ಏನೋ, ಒಂದು ಕಡೆಯಿಂದ ಸೇವಕರೊಬ್ಬರು ಭಕ್ತನ ಕೈಗೆ ಬೀಸಣಿಗೆಯನ್ನು ಕೊಟ್ಟು, 'ನೀವು ಸ್ವಲ್ಪ ಇಲ್ಲಿರಿ, ನಾನೀಗಲೇ ಬರುತ್ತೇನೆ' ಎಂದು ಹೇಳಿ ಹೊರಟುಹೋದರು. ಭಕ್ತನ ಮನದಾಸೆ ಈಡೇರಿತು. ಕೋಣೆಯಲ್ಲಿ ಮತ್ತಾರೂ ಇಲ್ಲ. ಕೆಲವು ಕ್ಷಣಗಳ ಕಾಲ ಭಕ್ತರ ಸಂದಣಿ ಖಾಲಿಯಾಯಿತು. ಬಾಬಾ ಹುಡುಗನಂತೆ ಹಾಸಿಗೆಯ ಮೇಲೆ ಮಲಗಿ 'ಉದ್ಬೋಧನ' ಹಾಗೂ 'ಬಸುಮತಿ'ಯ ಶ್ರೀರಾಮಕೃಷ್ಣ ಶತಾಬ್ದಿ ಸಂಖ್ಯೆಗಳನ್ನು ನೋಡುತ್ತಿದ್ದಾರೆ. ಆ ಸಂದರ್ಭದಲ್ಲಿ ಪ್ರಕಟವಾಗಿದ್ದ ತಮ್ಮದೇ ಲೇಖನಗಳನ್ನು ಅವರು ಮತ್ತೆ ಮತ್ತೆ ನೋಡುತ್ತಿರುವುದನ್ನು ಕಂಡು ಭಕ್ತನಿಗೆ ನಗು ಬಂತು.

ಸ್ವಲ್ಪ ನಂತರ ಬಾಬಾ ಬಾತ್‌ರೂಂಗೆ ಹೋದರು. ಅವರು ಹಿಂದಿರುಗಿ ಬಂದಾಗ ಏನು ಮಾಡಬೇಕೆಂದು ಭಕ್ತನಿಗೆ ತಿಳಿಯದಾಯಿತು. ಸೇವಕರು ಇನ್ನೂ ಬಂದಿಲ್ಲ. ಏನು ಮಾಡಲಿ?

ಭಕ್ತೆಯೊಬ್ಬಳು ವ್ಯಾಕುಲ ಚಿತ್ತದಿಂದ 'ಬಾಬಾ, ಬಾಬಾ' ಎನ್ನುತ್ತಾ ಕೋಣೆಯ ಒಳಹೊಕ್ಕಳು. ಬಾಬಾ ಆಗ ಭಕ್ತನಿಗೆಂದರು, ''ಬಹಳ ದೂರದಿಂದ ಪ್ರಯಾಣ ಮಾಡಿ ಬಂದಿದ್ದೇನೆ, ಎಲ್ಲಿ ಸ್ವಲ್ಪ ಚೆನ್ನಾಗಿ ಗಾಳಿ ಬೀಸು ನೋಡೋಣ. ನೀನು ಹಾಗೆ ಮಾಡುವ ಬದಲು ನನ್ನನ್ನು ನೋಡುತ್ತಿದ್ದೀಯಲ್ಲ? ಒಳ್ಳೇ ಭಕ್ತ!''

ಭಕ್ತನಾದರೋ ಹೇಗೋ ಸಂಬಾಳಿಸಿಕೊಂಡು ಬಹಳ ಜೋರಾಗಿ ಗಾಳಿ ಬೀಸತೊಡಗಿದನು. ಒಂದೆರಡು ಬಾರಿ ಮಂಚದ ಛತ್ರಿಗೂ ಬೀಸಣಿಗೆ ತಗುಲಿರಬೇಕು. ಭಕ್ತ ಮಹಿಳೆ ವಿನಂತಿಸಿಕೊಂಡಳು, ''ನನಗೆ ಕೊಡು, ನಾನೊಂದು ಸ್ವಲ್ಪ ಗಾಳಿ ಬೀಸುತ್ತೇನೆ.'' ಒಡನೆಯೇ ಭಕ್ತ ಅವಳ ಕೈಗೆ ಬೀಸಣಿಗೆಯನ್ನಿತ್ತು, ಮಹಾರಾಜರ ಸೇವಕನನ್ನು ಹುಡುಕುತ್ತ ಹೊರಗೆ ಹೋದ.

---

* ಹಳೆಯ ಶ್ರೀರಾಮಕೃಷ್ಣ ಮಂದಿರ; ಹೊಸ ದೇವಾಲಯವಿನ್ನೂ ನಿರ್ಮಾಣವಾಗಿರಲಿಲ್ಲ.

ಹೊರಗೆ ಜನಪ್ರವಾಹ ಕಡಿಮೆಯಾಗುತ್ತಾ ಬಂತು. ಸಂಜೆ ಕತ್ತಲಾಗುತ್ತಿದ್ದಂತೆ ಆರತಿಯ ಗಂಟೆಯ ಸದ್ದು ಕೇಳಿಬಂತು. ಮಂದಿರದಲ್ಲಿ 'ಖಂಡನ-ಭವ-ಬಂಧನ' (ಆರತಿಯ ಹಾಡು) ಮೊಳಗತೊಡಗಿತು.

ಹಿರಿಯ ಸಾಧುಗಳೊಬ್ಬರ ಆದೇಶದಂತೆ ಅಂದು ರಾತ್ರಿ ಮಠದಲ್ಲಿ ಉಳಿದುಕೊಳ್ಳುವ ಸೌಭಾಗ್ಯ ಪ್ರಥಮ ಬಾರಿಗೆ ನನಗೊದಗಿ ಬಂತು. ಅವರೆಂದರು, ''ಏನಾಯಿತು? ಮನೆಯಲ್ಲಿ ಸ್ವಲ್ಪ ಯೋಚಿಸುತ್ತಾರೆ - ಯೊಚಿಸುತ್ತ ಯೋಚಿಸುತ್ತ ಅವರೂ ದೇವರ ವಿಷಯವನ್ನೇ ಯೋಚಿಸುತ್ತಾರೆ. ಜಯಂತಿಪೂಜೆಯ ರಾತ್ರಿ ಅತಿ ಪವಿತ್ರವಾದ ರಾತ್ರಿ - ಕಾಳೀಪೂಜೆ ನಡೆಯುತ್ತದೆ, ಅನಂತರ ವಿರಜಾಹೋಮ, ಸಂನ್ಯಾಸ, ಬ್ರಹ್ಮಚರ್ಯ ದೀಕ್ಷೆ ನಡೆಯುವುದು. ಇವತ್ತು ಬೇಲೂರು ಮಠದ ಗಾಳಿ ಮೈಗೆ ತಗುಲಿದರೆ ಸಾಕು, ವಿವೇಕ -ವೈರಾಗ್ಯಗಳು ತಾವಾಗಿಯೇ ಬರುತ್ತವೆ, ಸಂಸಾರ ಬಂಧನವೆಲ್ಲವೂ ಕಳಚಿಹೋಗುತ್ತದೆ. ಇಂದು ಮಠದಲ್ಲಿರು. ಸ್ಥಳವಿದ್ದಲ್ಲಿ ಸ್ವಲ್ಪ ಮಲಗು. ಹಾಗೆಂದು ರಾತ್ರಿಯೆಲ್ಲ ನಿದ್ರೆಯಲ್ಲಿ ಕಳೆಯಬೇಡ.''

ಮುಂಜಾನೆಯ ನಸುಕಿನಲ್ಲೂ ಬಾಬಾ ಕೋಣೆಯಿಂದ ದೇವಾಲಯಕ್ಕೆ ಹೋಗುತ್ತಿದ್ದುದನ್ನು ಭಕ್ತ ನೋಡಿದ; 'ಸಂನ್ಯಾಸ', 'ಬ್ರಹ್ಮಚರ್ಯ' ನಡೆಯುತ್ತಿದೆ - ಅಲ್ಲಿ ಜನಸಾಮಾನ್ಯರಿಗೆ ಪ್ರವೇಶವಿಲ್ಲ. ಸಾಧ್ಯವಾದಷ್ಟು ನೋಡೋಣವೆಂದು ಭಕ್ತ ಹೊರಗಡೆ ಕಾದ. ನಸುಕು ಹರಿಯುತ್ತಲೇ ಮಠದಲ್ಲಿ ನವೀನ ಸಂನ್ಯಾಸಿ ಹಾಗೂ ಬ್ರಹ್ಮಚಾರಿಗಳು ಹೊಸದಾಗಿ ಲಭಿಸಿದ 'ಆನಂದ' ಹಾಗೂ 'ಚೈತನ್ಯ'ಗಳಿಂದ ತುಂಬಿ ಕಂಗೊಳಿಸುತ್ತಿರುವುದನ್ನು ನೋಡಿದ.* ಸ್ವಲ್ಪ ಹೊತ್ತಿನಲ್ಲೆ ಪ್ರಸಾದ ಸ್ವೀಕರಿಸಿ, ಏನನ್ನೋ ಯೋಚಿಸುತ್ತಾ ಭಕ್ತನು ಕಲ್ಕತ್ತೆಗೆ ವಾಪಸ್ಸಾದನು.

ಈ ನಡುವೆ ಒಂದು ದಿನ ಬೆಳಗಿನ ಹೊತ್ತು ಬೇಲೂರು ಮಠಕ್ಕೆ ಬಂದ ಭಕ್ತ ನೋಡಿದ : ಬಹಳ ಮಂದಿ ಸಾಧುಗಳಿಂದ ಸುತ್ತುವರಿದಿದ್ದ ಸ್ವಾಮಿ ಅಭೇದಾನಂದರು ಪಶ್ಚಿಮ ವರಾಂಡದಲ್ಲಿ ಸ್ವಾಮಿ ಅಖಂಡಾನಂದರನ್ನು ನೋಡುವ ಅಪೇಕ್ಷೆಯಿಂದ ಕುಳಿತಿದ್ದಾರೆ. ಅವರು ನಗುತ್ತ ಹೇಳಿದರು, ''ಗಂಗಾಧರನಿಗೆ ನಾನು ಬಂದಿದ್ದೇನೆಂದು ಹೇಳಿ ಕಳುಹಿಸು.'' ತರುವಾಯ ಮೇಲಿನ ಕೋಣೆಯಲ್ಲಿ ಇಬ್ಬರ ಮಿಲನ - ಆಲಿಂಗನದ ದೃಶ್ಯವು ನಿಜಕ್ಕೂ ಸ್ವರ್ಗೀಯವಾಗಿತ್ತು - ನೋಡಬೇಕಾದದ್ದು. ಕದ ಮುಚ್ಚಿ ಇಬ್ಬರೂ ಮಾತಾಡಿದರು. ಅರ್ಧಘಂಟೆಯ ಬಳಿಕ ಪೂಜ್ಯ ಕಾಳೀ ಮಹಾರಾಜರು (ಅಭೇದಾನಂದರು) ಮರಳಿ ಹೋದರು.

* ಸಂನ್ಯಾಸ ಹಾಗೂ ಬ್ರಹ್ಮಚರ್ಯ ದೀಕ್ಷೆ ಸ್ವೀಕಾರ ಮಾಡುವವರಿಗೆ ನೀಡಲಾಗುವ ಹೊಸ ಹೆಸರಿನ ಕೊನೆಯಲ್ಲಿ ಕ್ರಮವಾಗಿ 'ಆನಂದ' ಹಾಗೂ 'ಚೈತನ್ಯ' ಎಂಬುದು ಸೇರ್ಪಡೆಯಾಗುವುದು.ಅದನ್ನೇ ಇಲ್ಲಿ ಅನ್ವರ್ಥವಾಗಿ ಹೇಳಲಾಗಿದೆ.

**೧ನೇ ಮಾರ್ಚ್ ರವಿವಾರ :** ಇಂದು ಸಾರ್ವಜನಿಕರಿಗಾಗಿ ಶ್ರೀರಾಮಕೃಷ್ಣ ಜನ್ಮೋತ್ಸವ ನಡೆಯುವುದು. ಭಕ್ತನು ಸ್ನೇಹಿತನೊಬ್ಬನ ಜೊತೆಗೆ ಬೆಳಗ್ಗೆಯೇ ಬೇಲೂರು ಮಠಕ್ಕೆ ಬಂದಿದ್ದಾನೆ. ಅವನು ದಿನವಿಡೀ ಓಡಾಡಿದ್ದಾನೆ. ಇಂದು ಬಾಬಾರ ಕೋಣೆಗೆ ಬಂದುಹೋಗುವಂತಿಲ್ಲ. ಅಲ್ಲಿಗೆ ತನ್ನ ಸ್ನೇಹಿತನನ್ನು ಒಂದು ಸಲ ಕರೆದುಕೊಂಡು ಹೋಗಬೇಕೆಂಬುದೇ ಅವನ ಆಸೆ.

ಐದೂವರೆ ಗಂಟೆಗೆ ಬಾಬಾ ದರ್ಶನವಾಯಿತು. ಬಾಬಾ ಹೇಳಿದರು, ''ನೋಡು ಎಲ್ಲಡೆಯೂ ಏನು ಗಲಾಟೆ! ನನ್ನನ್ನು ಇವರು ಇಲ್ಲಿಯೇ ಇರಿಸಿಕೊಳ್ಳಬೇಕೆಂದಿದ್ದಾರೆ. ಸಾರಗಾಛಿ ಎಂಥ ಜಾಗವೆಂದು ಹೇಳು ನೋಡೋಣ - ಎಷ್ಟು ಶಾಂತ! ಆದರೆ ಠಾಕೂರರ ಕಾರ್ಯ - ಅವರು (ನಮ್ಮನ್ನು) ಯಾವಾಗ, ಎಲ್ಲಿರಿಸುತ್ತಾರೊ, ಏನು ಮಾಡಿಸುತ್ತಾರೊ, ಅವರಿಗೇ ಗೊತ್ತು.

ಸಂಜೆಯ ಕತ್ತಲಲ್ಲಿ ಬಾಬಾಗೆ ಪ್ರಣಾಮ ಮಾಡಿ ಭಕ್ತ ಬೀಳ್ಕೊಂಡ; ಸ್ವಲ್ಪ ತಡೆದು ನೋಡಿದ - ಉಜ್ವಲವಾದ ಮಹಾನ್ ದಿವ್ಯಮೂರ್ತಿ ಅವರದು! ಬಹಳಷ್ಟು ದಣಿದು ಬಳಲಿದ್ದರೂ ಅದು ಎಷ್ಟೊಂದು ಶಾಂತ ಹಾಗೂ ಸುಂದರ!

**೫ನೇ ಮಾರ್ಚ್ :** ಭಕ್ತನೊಬ್ಬನು ಭಕ್ತಿಯ ಆವೇಶದಿಂದ ಮತ್ತಾವ ಪ್ರಶ್ನೆಯನ್ನೂ ಕೇಳಲಾಗದೆ, ''ನೀವು ಯಾವಾಗ ಹೋಗುತ್ತೀರಿ?'' ಎಂದನು. (ಅಂದರೆ 'ಸಾರಗಾಛಿಗೆ ಯಾವಾಗ ಹೋಗುವಿರಿ' ಎಂದು) ಸ್ವಲ್ಪ ಚಕಿತರಾದ ಬಾಬಾ ಸಿಟ್ಟಿನಿಂದಲೇ, ''ಹೋಗುವ ವಿಷಯ ಕೇಳುವುದಕ್ಕೆ ನೀನು ಯಾರು? ನಾನಿಲ್ಲಿಗೆ ಬಂದಿದ್ದೇನೆ, ಎರಡು ದಿನ ಇರುವುದಕ್ಕೆ ಬಿಡು. ಹಾಗೆನ್ನದೆ, 'ಯಾವಾಗ ಹೋಗುತ್ತೀರಿ' ಎನ್ನುತ್ತೀಯಲ್ಲ?'' ಸ್ವಲ್ಪ ಹೊತ್ತು ಸುಮ್ಮನಿದ್ದು, ಅನಂತರ ಮೃದುಸ್ವರದಲ್ಲಿ, ''ಯಾವಾಗ ಹೋಗುತ್ತೇನೋ ನನಗೆ ತಿಳಿಯದು. ಆತನಿಚ್ಛೆಯಂತೆ ಬರುತ್ತೇನೆ, ಆತನಿಚ್ಛೆಯಂತೆ ಹೋಗುತ್ತೇನೆ. ಆದರೆ ಭಗವಂತನ ದೋಲ್‌ಪೂರ್ಣಿಮೆಗೆ (ಹೋಳಿ ಹುಣ್ಣಿಮೆ) ಮೊದಲು ಹೋಗಲಾಗುವುದಿಲ್ಲವೆಂದು ಕಾಣುತ್ತದೆ.''

ಎಲ್ಲರೂ ಬೀಳ್ಕೊಳ್ಳುತ್ತಿದ್ದಾರೆ. ಬಾಬಾ ಹೇಳಿದರು, ''ಇವತ್ತು ಏಕಾದಶಿ. ರಾಮನಾಮವನ್ನು ಕೇಳಿ ಹೊರಡಿ.''

**ದೋಲ್ ಪೂರ್ಣಿಮಾ, ಸಂಜೆ :** ''ಕೊಡು, ಆವೀರನ್ನು (ರಂಗು) ಕೊಡು. ಬಂದಿರುವರೆಲ್ಲರನ್ನೂ ಕರೆ, ಆವೀರನ್ನು ಕೊಡುತ್ತೇನೆ.'' ಒಬ್ಬರು ಆವೀರನ್ನು ತೆಗೆದುಕೊಳ್ಳದೆ ಹೊರಟುಹೋದರು. ಬಾಬಾ, ''ಅಯ್ಯೋ, ತಿಳಿಗೇಡಿ! ಹೊರಟುಹೋದ! ಕರೆ ಅವನನ್ನು, ಕರೆ ಅವನನ್ನು'' ಎಂದರು. ಮತ್ತೊಂದು ದಿನ ಸಂಜೆ; ಲಾಲ್‌ಬಾಬಾ ಆಶ್ರಮದ ಉದಾಸೀ ಸಾಧುಗಳೊಬ್ಬರು ಬಾಬಾರ ದರ್ಶನ ಪಡೆಯಲು ಬಂದಿದ್ದಾರೆ. ಬಾಬಾ ಅವರನ್ನು ಪ್ರೀತಿ, ಗೌರವದಿಂದ ತಮ್ಮ ಕೋಣೆಯಲ್ಲಿ ಕುರ್ಚಿಯ ಮೇಲೆ